


ರಾಜ್‌ಘಾಟ್‌ನಲ್ಲಿ ಲೇಖಕ

ಚಿಂತನೆಗಳನ್ನು ಬಿಂಬಿಸುವ ಚಲನ ಚಿತ್ರ ಪ್ರದರ್ಶನದ ವ್ಯವಸ್ಥೆಗೊಳಿಸಿದ್ದಾರೆ.

ಪ್ರತಿ ಶುಕ್ರವಾರ ಹಾಗೂ ಗಾಂಧೀಜಿಯವರ ಜನ್ಮದಿನ ಮತ್ತು ಪುಣ್ಯತಿಥಿಗಳಂದು ಇಲ್ಲಿ ಪ್ರಾರ್ಥನೆ ಮತ್ತು ಭಜನೆ ಕಾರ್ಯಕ್ರಮಗಳು ನಡೆಯುತ್ತವೆ. ಪ್ರವಾಸಿಗರು ವರ್ಷವಿಡೀ ಬೆಳಿಗ್ಗೆ ಹತ್ತರಿಂದ ಸಂಜೆ ಐದು ಗಂಟೆಯವರೆಗೆ ರಾಜ್‌ಘಾಟ್ ವೀಕ್ಷಿಸಬಹುದು. ಗಾಂಧೀಜಿಯವರ ಸಮಾಧಿಗೆ ಗೌರವ ಸಲ್ಲಿಸಲು ಹಾರವನ್ನು ಒಯ್ಯುವುದಕ್ಕೆ ಅವಕಾಶವಿದೆ.

ರಾಜ್‌ಘಾಟ್‌ನ ಉತ್ತರಕ್ಕೆ ಪಂಡಿತ್ ಜವಾಹರಲಾಲ್ ನೆಹರೂ ಅವರ ಸಮಾಧಿ 'ಶಾಂತಿವನ' ಇದೆ. ಲಾಲ್ ಬಹದ್ದೂರ್ ಶಾಸ್ತ್ರಿಯವರ ಸಮಾಧಿ 'ವಿಜಯ್ ಘಾಟ್', ಶ್ರೀಮತಿ ಇಂದಿರಾ ಗಾಂಧಿಯವರ ಸಮಾಧಿ 'ಶಕ್ತಿ ಸ್ಥಳ' ಬಾಬು ಜಗಜೀವನ್ ರಾಮ್ ಅವರ ಸಮಾಧಿ 'ಸಮತಾ ಸ್ಥಳ' ಮತ್ತು ರಾಜೀವ್ ಗಾಂಧಿಯವರ 'ವೀರ್ ಭೂಮಿ'– ಹೀಗೆ ಅನೇಕ ಹಿರಿಯ ನಾಯಕರ ಸಮಾಧಿ ಸ್ಥಳಗಳು ರಾಜ್‌ಘಾಟ್‌ನ ಸುತ್ತಮುತ್ತ, ಹತ್ತಿರದಲ್ಲಿಯೇ ಇವೆ.



